ಮೂರ್ತಿ ಸಾಹೇಬರ ಅದೇ ಸಿಗ್ನೇಚರ್ ನಗು, ಗುರುತು ಹಿಡಿಯಲು ಅಷ್ಟೇ ಸಾಕಾಗಿತ್ತು. ಸ್ವಲ್ಪ ಹೆಚ್ಚೇ ದಪ್ಪಗಾಗಿದ್ದಾರೆ, ಮುಖದಲ್ಲಿ ಅನುಭವೀ ವರ್ಚಸ್ಸು. ವಯಸ್ಸಾದ ಕುರುಹಾಗಿ ಅವರ ತಲೆಕೂದಲು ಬಿಳಿಬಣ್ಣಕ್ಕೆ ತಿರುಗಿತ್ತು. ಬೈಕಲ್ಲಿ ಇಬ್ಬರೂ ಮಳಿಗೆ ಇದ್ದಲ್ಲಿಗೆ ಬಂದೆವು. ನನ್ನ ಸಹಾಯಕ ಮಾತ್ರ ಇದ್ದ, ಸುಭಾಷ್ ಇರಲಿಲ್ಲ. ''ಭಾಜಿಫಲ ಕೊಟ್ಟು ಬರ್ತೇನೆ ಅಂತ ಮನೆ ಕಡೆ ಹೋಗಿದ್ದಾನೆ, ಈಗ ಬಂದಾನು'' ಎಂದ ಅವನು. ''ಬನ್ನಿ ಮೂರ್ತಿ ಸಾಬ್, ಕುಳಿತುಕೊಳ್ಳಿ. ಚಹಾ ತರಿಸಲೇ?'' ಎಂದು ಅಲ್ಲೇ ಇದ್ದ ಕುರ್ಚಿಯನ್ನು ತೋರಿಸಿದೆ. ಮೊದಲಿನ ಸಲುಗೆ ಇರಲಿಲ್ಲ, ಗಾಂಭೀರ್ಯವಿತ್ತು. ಆದರೆ, ಸಂಕೋಚ ಪಟ್ಟುಕೊಳ್ಳಲಿಲ್ಲ.

ಮೂರ್ತಿ ಸಾಬ್ ಜೊತೆ ಎಷ್ಟೂ ಸಲುಗೆಯಿಂದ ನಾವೆಲ್ಲ ವ್ಯವಹರಿಸಬಹುದಿತ್ತು. ನಾವೆಲ್ಲ ಅಂದರೆ ನಾನು, ಪಿಂಪ್ಳೆ, ವಿಸ್ಪುತೆ, ನಾರಾಯಣ್, ಜೋಶಿ ಮುಂತಾದವರೆಲ್ಲ ಅವರ ಕೈಕೆಳಗೆ ಕೆಲಸದಲ್ಲಿದ್ದೆವು. ಗೆಳೆತನದ ಆತ್ಮೀಯತೆಯೋ ಅಥವಾ ಬೇರೆ ಏನೋ ಒಂದು... ಹಸಿವಾದಾಗ ಮೂಗಿಗೆ ಬಡಿಯುವ ವಡಾಪಾವು ಘಮಲಿನ ಸೆಳೆತದ ಹಾಗಿನ ಆಕರ್ಷಣೆ ಅವರಲ್ಲಿತ್ತು. ಎಂತಹ ವಿಷಮ ಸ್ಥಿತಿಯಲ್ಲಿಯೂ ನಗು ನಗುತ್ತಲೇ ವ್ಯವಹಾರ. ಆ ಸಮಯ ಕಂಪನಿಯಲ್ಲಿ ನಮ್ಮ ಯೂನಿಯನ್ ತುಂಬ ಬಲವಾಗಿ ಬೆಳೆದಿತ್ತು. ದತ್ತಾ ಸಾಮಂತನ ಯೂನಿಯನ್ನು ಬೇರೆ. ಕೆಲಸಗಾರರೇ ಎಂಜಿನಿಯರುಗಳನ್ನು ನಿಯಂತ್ರಿಸುತ್ತಿದ್ದಂತಹ ಕಾಲ. ಒಂದು ರೀತಿಯ ಭಯದ ವಾತಾವರಣ ಎಂಜಿನಿಯರುಗಳಿಗೆ, ಇಲಿಗಳೇ ಮಾರ್ಜಾಲದ ಅವತಾರ ಧರಿಸಿ ಬಂದ ಹಾಗೆ. ಆದರೆ, ಮೂರ್ತಿ ಸಾಹೇಬರು ಈ ಬಗ್ಗೆ ತಲೆ ಕೆಡಿಸಿಕೊಂಡಿದ್ದೇ ಇಲ್ಲ. ನಮ್ಮಂತಹ ಕೆಲಸಗಾರರ ಜೊತೆ ಯಾವ ತಕರಾರೂ ಇರುತ್ತಿರಲಿಲ್ಲ. ಎಲ್ಲ ಕೆಲಸಗಾರರ ಜೊತೆ ಸ್ನೇಹದಿಂದ ವರ್ತಿಸುತ್ತಿದ್ದರು. ನಮ್ಮ ವಿಭಾಗದ ದೊಡ್ಡ ಸಾಹೇಬರ ಪಿ.ಎ. ಆಗಿದ್ದ ಸುಭಾಷ್, ಅವನಿಗೂ ಇಷ್ಟವಾದರು. ಆತ ಆಗಾಗ ಬಂದು ಮೂರ್ತಿಯವರನ್ನು ಕಂಡು ಮಾತಾಡಿಸುತ್ತಿದ್ದ, ಒಮ್ಮೆ ಇದನ್ನು ಕಂಡ ನಾನು, ''ಮೂರ್ತಿ ಸಾಬ್, ಇವನ ಬಗ್ಗೆ ಜಾಗ್ರತೆಯಿಂದಿರಿ. ಚಂದ ಮಾತಾಡಿಸಿ ನಿಮ್ಮ ಜೇಬಿಗೇ ಕೈ ಹಾಕಿಯಾನು'' ಎಂದು ರೇಗಿಸಿದ್ದೆ. ''ಲೇ... ಮೂರ್ಖ, ಸುಮ್ನಿರು. ಇವ ಹೇಳಿದ್ದನ್ನು ನಂಬಬೇಡಿ ಮೂರ್ತಿ ಸಾಬ್'' ಎಂದು, ''ಹೋಗೋ... ಹೋಗಿ ನಿನ್ನ ಕೆಲಸ ನೋಡಿಕೋ'' ಎನ್ನುತ್ತಾ ನನ್ನ ಮೇಲೆ ರೇಗಿದ. ಮೂರ್ತಿ ಸಾಹೇಬರು ಮುಜುಗರ ಪಟ್ಟುಕೊಂಡು, ''ಹೇ... ಯಾಕೆ ಮಾರಾಯ ಹಾಗೆ ಹೇಳ್ತಿ, ಸುಮ್ಮನೆ ರೇಗಿಸುವ ಕೆಲಸ ನಿನ್ನದು. ಕೋಪಿಸಿಕೊಂಡು ಹೋದನಲ್ಲ'' ಎಂದು ನನ್ನನ್ನು ಆಕ್ಷೇಪಿಸಿದ್ದರು. ಸುಭಾಷ್‌ನದ್ದು ಈಗಲೂ ನನ್ನೊಡನೆ ಏಕವಚನದಲ್ಲೇ ಮಾತು. ನನಗದು ಇಷ್ಟ ಕೂಡ. ಈಗ ಮೊದಲಿನಷ್ಟು ರೇಗಿಸುವುದಿಲ್ಲ, ಎರಡು ಮಕ್ಕಳ ಅಪ್ಪನಾಗಿದ್ದಾನಲ್ಲ. ''ತಗೊಳ್ಳಿ ಮೂರ್ತಿ ಸಾಬ್. ಚಹಾ ಕುಡಿಯಿರಿ. ಆಮೇಲೆ ಮಾತಾಡೋಣ. ನಾನಂತೂ ಬೇರೆ ಯಾವುದೇ ಕೆಲಸ ಇಟ್ಟುಕೊಂಡಿಲ್ಲ. ದಿನಪೂರ್ತಿ ನಿಮ್ಮೊಡನೆ ಪಟ್ಟಾಂಗ ಹೊಡೆಯುವ ಆಲೋಚನೆಯಲ್ಲಿದ್ದೇನೆ. ಸುಭಾಷ್ ಈಗ ಬಂದಾನು. ಆಮೇಲೆ ನನಗೆ ಮಾತಾಡಲು ಅವಕಾಶ ಸಿಗಲಿಕ್ಕಿಲ್ಲ'' ಅಂತ ನಕ್ಕೆ. ಅದೇ ಮುಕ್ತವಾದ ನಗು ಮೂರ್ತಿ ಸಾಹೇಬರದು. ಮುಂಬಯಿ ಬಿಟ್ಟು ಹೋದ ಮೇಲೆ ನಡೆದ ಬೆಳವಣಿಗೆಗಳು, ನೌಕರಿ, ಸಂಸಾರ ಅಂತೆಲ್ಲ ತುಂಬ ವಿಷಯ ಮಾತಾಡಿದರು. ನಡುವೆ, ''ನಿನ್ನ ಮಕ್ಕಳು ಏನು ಮಾಡ್ತಾ ಇದ್ದಾರೆ'' ಅಂತ ವಿಚಾರಿಸಿದರು. ''ಒಬ್ಬನೇ ಮಗ, ಸದ್ಯ ನೇವಿಯಲ್ಲಿ ಕೆಲಸಕ್ಕೆ ಸೇರುವವನಿದ್ದಾನೆ. ಗುಜರಾತಿನಲ್ಲಿ ಟ್ರೈನಿಂಗು ನಡೀತಾ ಇದೆ. ಅದಾದಮೇಲೆ ಎಲ್ಲಿ ಪೋಸ್ಟಿಂಗು ಅಂತ ಗೊತ್ತಾಗಬಹುದು. ಈಗ ಮನೆಯಲ್ಲಿ ನಾವಿಬ್ಬರೇ'' ಎನ್ನುವಷ್ಟರಲ್ಲಿ ಸುಭಾಷ್ ಬರುತ್ತಿರುವುದು ತಿಳಿಯಿತು. ಪಕ್ಕದ ಮಳಿಗೆಯವನ ಜೊತೆ, ''ಏನೂ... ಕೇಳ್ಕರ್ ಸಾಬ್. ಇವತ್ತಿನ ಸಾಮ್ನಾ ಓದಿ ಆಯಿತಾ ಹೇಗೆ? ನೀವು ಬಿಡಿ ಸಾಮ್ನಾ ಬಿಟ್ಟು ಬೇರೆ ಯಾವ ಪೇಪರನ್ನೂ ಓದುವವರಲ್ಲ'' ಅಂತ ಗಟ್ಟಿ ಸ್ವರದಲ್ಲಿ ವಿಚಾರಿಸಿಕೊಂಡು ಬರುತ್ತಿದ್ದ. ನಮ್ಮ ಮಳಿಗೆಯ